

# ಕುಂಭಮೇಳ

## ಅನನ್ಯ, ಅಮೋಘ, ಅಪೂರ್ವ

■ ಆನಂದತೀರ್ಥ ಪ್ಯಾಟಿ, ಗಾಣಧಾಳು ಶ್ರೀಕಂಠ

ಕೆಲವು ಸಾವಿರ ಜನರು ಸೇರುವ ಸಮಾರಂಭಗಳಲ್ಲಿಯೇ ಎಷ್ಟೊಂದು ಸಮಸ್ಯೆ, ತೊಂದರೆಗಳು ಉದ್ಭವವಾಗುತ್ತವೆ! ಹಾಗಿದ್ದಲ್ಲಿ, ಕೋಟ್ಯಂತರ ಜನರು ಒಂದೆಡೆ ನಿರ್ದಿಷ್ಟ ದಿನದಲ್ಲಿ ಬಂದು ಸೇರುವ ಕುಂಭಮೇಳದ ತಯಾರಿ ಹೇಗಿದ್ದೀತು? ನಿರ್ದಿಷ್ಟ ದಿನಗಳಂದು ಸುಮುಹೂರ್ತದಲ್ಲಿ ಪುಣ್ಯ ಸ್ನಾನ ಮಾಡಲು ಅಲಹಾಬಾದಿನ ತ್ರಿವೇಣಿ ಸಂಗಮಕ್ಕೆ ಜನರು ಸರದಿಯೋಪಾದಿಯಲ್ಲಿ ಬರುತ್ತಾರೆ. ಆ ದಿನಗಳ ಹಿಂದಿನ ಸಂಜೆಯಿಂದಲೇ ಸ್ನಾನಘಟ್ಟಗಳತ್ತ ಭಕ್ತಜನರ ಸಾಲು ಅರೆಕ್ಷಣ ಬಿಡದಂತೆ ಸಾಗುತ್ತಲೇ ಇರುತ್ತದೆ. ಆ ನೋಟವೇ ವಿಸ್ಮಯ. ಹಾಗೆ ಬಂದವರು ನಸುಕಿನ ಜಾವದಲ್ಲಿ ಮೈ ನಡುಗುವ ಚಳಿಯಲ್ಲಿ ಸ್ನಾನ ಮಾಡಿ, ಮಧ್ಯಾಹ್ನದ ಹೊತ್ತಿಗೆ ವಾಪಸು ಹೊರಡುತ್ತಾರೆ. ಅಲಹಾಬಾದಿನ (ಪ್ರಯಾಗರಾಜ್) ರಸ್ತೆಗಳು ಈಗ ಸಂಪೂರ್ಣ ಉಲ್ಟಾ!

ಬಂದು ಹೋಗುವವರ ಸುರಕ್ಷತೆಯನ್ನು ಗಮನದಲ್ಲಿ ಇಟ್ಟುಕೊಂಡು ನಡೆಸಿದ ತಯಾರಿಗಳು ಏನೇನಿರಬಹುದು? ಎಲ್ಲೂ ಯಾವುದೇ ಸಣ್ಣ ಅವಗಢವೂ ನಡೆಯದಂತೆ ತಿಂಗಳುಗಳ ಹಿಂದಿನಿಂದಲೇ ಏಷ್ಟೆಲ್ಲ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರಬಹುದು? ಹಲವು ಸಾವಿರ – ಹೆಚ್ಚೆಂದರೆ ಲಕ್ಷ – ಜನರು ಸೇರುವ ಪಂದ್ಯಾವಳಿ ಅಥವಾ ಸಮಾವೇಶವನ್ನೇ ಹೋಲಿಕೆಗೆ ತೆಗೆದುಕೊಂಡರೆ, ಕೋಟಿಗಟ್ಟಲೇ ಜನರು ಒಂದೆಡೆ ಸೇರುವ ಜಗತ್ತಿನ ಅತಿ ದೊಡ್ಡ ಸಮಾವೇಶ ಆಯೋಜನೆಯ ಹಿಂದಿನ ಶ್ರಮ ಅರ್ಥವಾದೀತು.

